ಶ್ರೀ ಎಸ್ ಹೆಚ್. ಕೌಜಲಗಿ.—ಇವತ್ತು ಅಲ್ಲಿ ಕೋಟಿಗಟ್ಟಲೆ ವ್ಯವಹಾರ ಆಗುತ್ತಿದೆ. ಇದು ಖರೀದಿಯಾಗಿಲ್ಲವೆಂದು ಟೆಲಿಗ್ರಾಂ ಮಾಡಿದ್ದಾರೆ. ಅವರು ಸತ್ಯಾಗ್ರಹ ಮಾಡುತ್ತಿದ್ದಾರೆ. ಈ ಬಗ್ಗೆ ಸಿಸಿಐನವರಿಗೂ ಫೆಡರೇಷನ್‌ನವರಿಗೂ ತಿಳಿಸಿದ್ದೇನೆ. ಜನ ಎ. ಸಿ. ಕಚೇರಿ ಮುಂದೆ ಸಂಪು ಮಾಡಿದ್ದಾರೆ ರೈತಸಂಘದ ಅಧ್ಯಕ್ಷರೂ ಅಲ್ಲಿಗೆ ಹೋಗಿ ಖರೀದಿ ಮಾಡಬೇಕು ಎಂದು ಹೇಳಿಬಂದಿದ್ದಾರೆ. ಅಲ್ಲಿ ವ್ಯಾಪಾರಸ್ಥರೂ ರೇಟ್ ಕಡಿಮೆಯಾಗಲಿ ಎಂದು ಕೊಳ್ಳಲು ಮುಂದೆ ಬಾರದೆ ಕಾಯುತ್ತಿದ್ದಾರೆಂಬುದನ್ನೂ ಹೇಳಿದಿರಿ. ಹೀಗಾದರೆ ಫೆಡರೇಷನ್ ಕೆಲಸ ಏನು? ಇದು ರೈತರ ಶೋಷಣೆ ಮಾಡಲು ಇದೆಯೇ ? ಇವೊತ್ತಿನವರೆಗೆ ಆ ಹತ್ತಿಯನ್ನು ಏಕೆ ಕೊಂಡಿಲ್ಲ? ಆ ಅಧಿಕಾರಿಗಳ ಮೇಲೆ ಏನು ಆಕ್ಷನ್ ತೆಗೆದು ಕೊಂಡಿದ್ದೀರಿ? ನಿನ್ನೆ ತಾರೀಖಿನವರೆಗೆ ಅಲ್ಲಿನ ವ್ಯಾಪಾರಕ್ಕೆ ನಿಲುಗಡೆ ಆಗದೆ ಎನ್ನುತ್ತಿರಿ. ಈ ರೀತಿ ಕ್ರಮಕ್ಕೆ ಏನು ಕಾರಣ ಎಂದು ಅಧಿಕಾರಿಗಳನ್ನು ಕಳುಹಿಸಿ ವಿಚಾರಣೆ ಮಾಡಿಸಿದ್ದೀರಾ ? ಅಲ್ಲಿ ಕೋಟಿಗಟ್ಟಲೆ ಹತ್ತಿ ವ್ಯಾಪಾರ ಆಗದೇ ಇರುವಾಗ ಆಫೀಸರ್ಸ್ ಕೂಡ ವಿಸಿಟ್ ಮಾಡುವುದಕ್ಕೆ ತಯಾರು ಇಲ್ಲ.

ಶ್ರೀ ಎಂ. ರಾಜಶೇಖರ ಮೂರ್ತಿ.—ಈ ರಾಜ್ಯದಲ್ಲಿ ೩೫ ಟೆಕ್ಸ್‌ಟೈಲ್ ಫ್ಯಾಕ್ಟರಿಗಳು ಇದ್ದು ಇವುಗಳಲ್ಲಿ ೧೫ ಮುಚ್ಚಿವೆ. ಆದ್ದರಿಂದ ಹತ್ತಿಗೆ ಬೇಡಿಕೆ ಬಹಳ ಮಟ್ಟಿಗೆ ಕಡಿಮೆ ಆಗಿದೆ. ಇತ್ತೀಚೆಗೆ ಕಾಟನ್ ಕಾರ್ಪೊರೇಷನ್ ಆಫ್ ಇಂಡಿಯಾದವರು ಹೊರಗಡೆ ರಫ್ತು ಮಾಡಬೇಕೆಂದು ಹೇಳಿ ಸ್ವಲ್ಪ ರಿಯಾಯಿತಿಯನ್ನು ಟ್ಯಾಕ್ಸ್‌ನಲ್ಲಿ ಕೇಳಿದರು. ಆ ರಿಯಾಯಿತಿಯನ್ನು ಈಗ ಕೊಟ್ಟಿದ್ದೇವೆ. ಮತ್ತು ಅವರು ಮಾರ್ಕೆಟ್‌ಗೆ ಬಂದು ಕಾಟನ್ ಖರೀದಿ ಮಾಡಿ ಹೊರಗಡೆ ರಫ್ತು ಮಾಡುತ್ತಾರೆ. ಆಗ ಪರಿಸ್ಥಿತಿ ಸ್ವಲ್ಪ ಮಟ್ಟಿಗೆ ಉತ್ತಮ ಆಗಬಹುದು; ಆದರೆ ಬಹಳ ಉತ್ತಮ ಆಗಬೇಕಾದರೆ ಏನಾ ಬಾಗಿಲು ಮುಚ್ಚಿರುವ ಫ್ಯಾಕ್ಟರಿಗಳು ಇವೆ ಅವನ್ನು ತೆಗೆದರೆ ಮಾತ್ರ ಪರಿಸ್ಥಿತಿ ಉತ್ತಮ ಆಗುತ್ತದೆ. ಬೆಳೆದವರಿಗೂ ಒಳ್ಳೆಯ ಬೆಲೆ ಸಿಗುತ್ತದೆ.

(ಗೊಂದಲ)

ಅಧ್ಯಕ್ಷರು.—ಸಿಸಿಐಗೆ ರಿಯಾಯಿತಿ ಕೊಡಲಾಗಿದೆ ಎಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ, ಬಾಕಿ ಏನೇ ವಿಚಾರ ಇದ್ದರೂ...

ಶ್ರೀ ಎಸ್. ಹೆಚ್. ಕೌಜಲಗಿ.—ಅವರು ಬೈಲಹೊಂಗದಲ್ಲಿ ಹತ್ತಿ ಖರೀದಿ ಮಾಡದೇ ಇರಲು ಕಾರಣ ಏನು? ಬೇರೆ ಕಡೆ ಮಾಡಿ ಇಲ್ಲಿ ಮಾಡದಿರಲು ಕಾರಣವನ್ನು ತಿಳಿಸಬೇಕು. ರೈತರು ಆ ರೇಟಿಗೆ ಕೊಡಲಿಕ್ಕೆ ತಯಾರಾಗಿದ್ದಾರೆ. ಸರ್ಕಾರ ರೈತರ ಸಲುವಾಗಿ ಮಾರ್ಕೆಟ್ ವ್ಯವಸ್ಥೆ ಮಾಡುತ್ತಿಲ್ಲ. ಸರ್ಕಾರ ಯಾವುದೇ ಕ್ರಮವನ್ನು ತೆಗೆದುಕೊಳ್ಳುತ್ತಿಲ್ಲ. ಇದು ಮಹತ್ವವಾದ ವಿಚಾರ.

ಅಧ್ಯಕ್ಷರು.—ಇದು ಮಹತ್ವವಾದ ವಿಚಾರವೆಂದು ಅಕಾಶ ಮಾಡಿಕೊಟ್ಟಿದ್ದೇನೆ. ಗವಂನ ಸೆಳೆಯುವ ಸೂಚನೆಯ ಮೂಲಕ ಸಭೆಯಲ್ಲಿ ಚರ್ಚೆ ಮಾಡಲಿಕ್ಕೆ ಅವಕಾಶ ಕೊಟ್ಟು ಅದಕ್ಕೆ ಮಂತ್ರಿಗಳು ಈಗ ಉತ್ತರ ಕೊಟ್ಟಿದ್ದಾರೆ. ಇರತಕ್ಕ ಪರಿಸ್ಥಿತಿಯ ಬಗ್ಗೆ ಬೆಳಕನ್ನು ಚೆಲ್ಲಿದ್ದಾರೆ. ಪರಿಸ್ಥಿತಿ ಉತ್ತಮವಾಗುವುದಕ್ಕೆ ಇನ್ನು ಸ್ವಲ್ಪ ಕಾಲಾವಕಾಶಬೇಕೆಂದು ಕೇಳಿದ್ದಾರೆ. ಇದರ ಬಗ್ಗೆ ಇನ್ನು ಹೆಚ್ಚು ಚರ್ಚೆ ಮಾಡಬೇಕಾದರೆ ಬೇರೆ ಅವಕಾಶಗಳು ಇವೆ. ಅದಕ್ಕೆ ತಾವು ಬೇರೆ ನೋಟೀಸ್ ಕೊಡಬೇಕಾಗುತ್ತದೆ.

ಶ್ರೀ ಎಸ್. ಹೆಚ್. ಕೌಜಲಗಿ.—ಆವರೇಜ್ ರೇಟ್ ಬರಲಿ ಸದ್ಯದತ್ತಿಯೊಳಗೆ ೧ ಸಾವಿರ ರೂಪಾಯಿಗಳಿಗೆ ಕೊಡುತ್ತಾರೆ. ಇವತ್ತು ರೈತರ ಪರಿಸ್ಥಿತಿ ಏನು ಎನ್ನುವುದನ್ನು ವಿಚಾರ ಮಾಡಬೇಕಾಗುತ್ತದೆ.

ನಿಯಮ 334ರ ಮೇರೆಗೆ

1) ಕಾಳಿ ಜಲವಿದ್ಯುತ್ ಯೋಜನೆಯ ಸೂಪ ಡ್ಯಾಮ್‌ನಿಂದ ಜಮೀನು ಹಾಗೂ ಮನೆಗಳು ಮುಳುಗಡೆಯಾದ ಕುಟುಂಬಗಳಿಗೆ ಪರಿಹಾರ ಒದಗಿಸುವ ಬಗ್ಗೆ.

ಶ್ರೀ ಪ್ರಭಾಕರ ಎಸ್. ರಾಣೆ.—ಕಾಳಿ ಜಲವಿದ್ಯುತ್ ಯೋಜನೆಯ ಸೂಪ ಡ್ಯಾಮ್‌ನಿಂದ ಪ್ರಥವು ಎರಡನೆಯ ಮತ್ತು ಮೂರನೇ ಹಂತದ ಮುಳುಗಡೆಯಾದ ನೂರಾರು ಕುಟುಂಬಗಳು ಜಮೀನು ಕಳೆದುಕೊಂಡು ನಿರಾಶ್ರಿತರಾಗಿ ಈವರೆಗೆ ಪರಿಹಾರದ ಹಣ, ಹೆಚ್ಚುವರಿ ಹಣ, ಪುನರ್ವಸತಿ ಅನುದಾನ ದೊರಕದೆ ಜನರು ತ್ರಿಶಂಕು ಸ್ಥಿತಿಯಲ್ಲಿದ್ದಾರೆ.

ಶತಮಾನದ ಕಾಲದಿಂದ ಅನುಭವಿಸಿಕೊಂಡು ಬಂದಿರುವ ತಮ್ಮ ಪೂರ್ವಜರ ಆಸ್ತಿ ಪಾಸ್ತಿಯನ್ನು ನಾಡಿಗೆ ಬೆಳಕು ನೀಡಲು ತ್ಯಾಗಮಾಡಿದ ಈ ಜನರ ಜೀವನದಲ್ಲಿ ಬೆಳಕು ಕಾಣುವುದು ಸಾಧ್ಯವೆ?

ಈ ಜನತೆಗೆ ಸರ್ಕಾರವು ನೀಡಿದ ಅನೇಕ ಭರವಸೆಗಳನ್ನು ಅಧಿಕಾರಿಗಳ ದಿವ್ಯ ನಿರ್ಲಕ್ಷ್ಯದಿಂದಾಗಿ ಈಡೇರದೆ ಈ ಜನರ ಬದುಕು ತೀರಾ ಶೋಚನೀಯ ಸ್ಥಿತಿಯಲ್ಲಿದೆ.

ಜೋಡಾದ ಬಳಿ ಈ ಜನರಿಗೆ ಮನೆ ನಿವೇಶನಗಳನ್ನು ನೀಡಲು ನಿರ್ಣಯಿಸಿ ಅನೇಕ ವರ್ಷಗಳು ಉರುಳಿದರೂ ಸಹ ನಿವೇಶನಗಳು ಇನ್ನೂ ಸಿದ್ಧವಾಗಿಲ್ಲ ಅಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಇಲ್ಲ ಬೆಳಕಿಲ್ಲ ಶಾಲೆಯಿಲ್ಲ. ಈ ಜನ ಕಾಂಗ್ರೆಸ್ಸಿಗೆ ಬೆಂಬಲಿಗರಾಗಿದ್ದರೆಂಬ ಒಂದೇ ಒಂದು ಕಾರಣದಿಂದ ಈ ಹಿಂದಿನ ಸರ್ಕಾರ ಸೇಡಿನ ಮನೋಭಾವನೆಯಿಂದ ಪ್ರತಿ ಹಂತದಲ್ಲೂ ವಿಳಂಬ ಧೋರಣೆ ಅನುಸರಿಸುವ ಮೂಲಕ ಸೇಡು ತೀರಿಸಿಕೊಂಡಿತು.

ಜನ ವಿರೋಧಿ ನೀತಿಯನ್ನು ಅನುಸರಿದ ಹಿಂದಿನ ಸರ್ಕಾರದ ಧೋರಣೆಯಿಂದ ಕೆಲವಾದರೂ ಮುಕ್ತಿ ಸಿಗಬಹುದೇ ಈ ಜನರ ಆಶೋತ್ತರಗಳ ಬೇಡಿಕೆಗಳಿಗೆ ಕಿವುಡರಾಗಿರುವ ಅಧಿಕಾರಿಗಳನ್ನು ಹತೋಟಿಗೆ ತರುವ ಕಾರ್ಯ ಸರ್ಕಾರ ಮಾಡುವುದೆ?

ಪರಿಹಾರ ಹೆಚ್ಚಿನ ಪರಿಹಾರ, ಹಾಗೂ ಪುನರ್ವಸತಿ ಅನುದಾನ ನೀಡುವ ಹೊಣೆಗಾರಿಕೆ ಇರುವ ದಾಂಡೇಲಿಯ ವಿಶೇಷ ಭೂಸ್ವಾಧೀನ ಅಧಿಕಾರಿಯ ಕಛೇರಿಯಲ್ಲಿ ತಾಂಡವವಾಡುತ್ತಿರುವ ಭ್ರಷ್ಟಾಚಾರಕ್ಕೆ ಕೊನೆ ಹಾಡುವಿರಾ ಎಂದು ಕೇಳಬಯಸುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ.—ನಾನು ಕ್ರಿಯಾಲೋಪವನ್ನು ಎತ್ತುತ್ತೇನೆ.

ಶ್ರೀ ಪ್ರಭಾಕರ ಎಸ್. ರಾಣೆ.—ನನಗೆ ಮಂತ್ರಿಗಳಿಂದ ಉತ್ತರ ಬೇಕಾಗಿದೆ, ಈಗ ನೀವು ಮಂತ್ರಿಗಳಲ್ಲ. ಇಲ್ಲಿ ಕ್ರಿಯಾಲೋಪಕ್ಕೆ ಅವಕಾಶವಿಲ್ಲ.

ಶ್ರೀ ಆರ್. ವಿ. ದೇಶಪಾಂಡೆ —ನಾನು ಈ ವಿಚಾರದಲ್ಲಿ ಏನು ಹೇಳುತ್ತೇನೆಂದರೆ ಅವರು ಈ ಮನೆಯ ಸದಸ್ಯರು ಇದ್ದರು. ಅವರಿಗೂ ಜವಾಬ್ದಾರಿ ಇತ್ತು. ಹಿಂದೆ ಒಂದು ದಿವಸವೂ ಕೂಡ ಅವರು ಈ ಮಾತನ್ನು ಹೇಳಲಿಲ್ಲ. ಇವತ್ತು ಹೇಳುತ್ತಿದ್ದಾರೆ.

ಶ್ರೀ ಪ್ರಭಾಕರ ರಾಣೆ.—ಯಾವುದೇ ವೈಯಕ್ತಿಕವಾದ ಆಪಾದನೆಯನ್ನು ನಾನು ಮಾಡಿಲ್ಲ.

ಅಧ್ಯಕ್ಷರು.—ಕ್ರಿಯಾಲೋಪ ಇದರಲ್ಲಿ ಬರುವುದಿಲ್ಲ.

R. V. DESHAPANDE.—They cannot charge the previous Government ..

ಶ್ರೀ ಪ್ರಭಾಕರ್ ಎಸ್ ರಾಣೆ.—ಮಾನ್ಯ ಸದಸ್ಯರಾದ ದೇಶಪಾಂಡೆಯವರು ಹೇಳಿರತಕ್ಕ ಮಾತನ್ನು ಕಡತದಿಂದ ಹೊರ ತೆಗೆಸಬೇಕು.

SRI AZEES SAIT.—(Minister for Revenue) I will checkup and see what best can be done. I will call the Member and discuss with him in my chamber.

೨. ದಕ್ಷಿಣ ಕನ್ನಡ ಜಿಲ್ಲೆಯ ಉಳ್ಳಾಲ ಕ್ಷೇತ್ರದಲ್ಲಿ ಅಲ್ಪ ಸಂಖ್ಯಾತರ ಮತ್ತು ಪರಿಶಿಷ್ಟ ವರ್ಗದವರು ಅನೇಕ ವರ್ಷಗಳಿಂದ ಅಕ್ರಮವಾಗಿ ಮನೆಕಟ್ಟಿಕೊಂಡು ಕೃಷಿ ಮಾಡಿದಂತಹ ಜಮೀನಾನನ್ನು ಸಕ್ರಮಗೊಳಿಸುವುದು

ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ).—ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆದರಲ್ಲೂ ಉಳ್ಳಾಲ ಕ್ಷೇತ್ರದಲ್ಲಿ ಅನೇಕ ವರ್ಷಗಳಿಂದ ಬಡವರು, ಅಲ್ಪಸಂಖ್ಯಾತರು, ಪರಿಶಿಷ್ಟ ವರ್ಗದವರು ಅಕ್ರಮವಾಗಿ ಮನೆಕಟ್ಟಿಕೊಂಡು ಕೃಷಿ ಮಾಡಿಕೊಂಡು ಕುಳಿತುಕೊಂಡವರ ಜಮೀನನ್ನು ಇನ್ನೂ ಸಕ್ರಮವಾಗಿ ಖಾಯಂಗೊಳಿಸಿ, ಹಕ್ಕುಪತ್ರಗಳನ್ನು ಕೊಟ್ಟಿರುವುದಿಲ್ಲ. ಇದರಿಂದ ಸಾವಿರಾರು ಬಡವರಿಗೆ ತುಂಬಾ ಕಷ್ಟವಾಗಿರುತ್ತದೆ. ಆದಕಾರಣ ಅನೇಕ ಕಾಲದಿಂದ ಅಕ್ರಮವಾಗಿ ಕುಳಿತಿರುವ ಬಡವರಿಗೆಲ್ಲ ಅವರು ಕುಳಿತ ಜಮೀನನ್ನು ಸಕ್ರಮವಾಗಿ ಮಾಡಿ ಹಕ್ಕು ಪತ್ರಗಳನ್ನು ಕೊಡುವಂತೆ ಮಾಡಬೆ ಕಾಗಿ ಮಾನ್ಯ ಕಂದಾಯ ಸಚಿವರ ಗಮನವನ್ನು ಸೆಳೆಯುತ್ತೇನೆ.